**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು</u>**

**<u>ಹುಕ್ಕೇರಿ.</u>**

CC No. 664/2023
CW- 1/ PW- 1

ಹೆಸರು : ಈರಣ್ಣ ಮಾದೇವ ಜಿಗಜಿಂಪಿ

ವಯಸ್ಸು : 63 ವರ್ಷ

ಉದ್ಯೋಗ : ನಿವೃತ್ತ ಶಿಕ್ಷಕ

ವಾಸಸ್ಥಳ : ಬಸಾಪುರ, ತಾಃ ಹುಕ್ಕೇರಿ.

**(ದಿನಾಂಕ 23.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀಃ ಬಿ ಬಿ ಬಿ ವಕೀಲರಿಂದ</u>**

1. ನನಗೂ ಮತ್ತು ಆರೋಪಿಗೂ ಒಳ್ಳೆಯ ಸಂಬಂಧ ಇದೆ ಎಂದರೆ ನಿಜ. ನನ್ನ ಮತ್ತು ಆರೋಪಿಯ ನಡುವೆ ರೂ. 2,00,000/- ಸಂಬಂಧಪಟ್ಟಂತ ಕೈಗಡ ಸಾಲ ಇತ್ತು ಎಂದರೆ ನಿಜ. ನಾನು ಅವರಿಗೆ ರೂ. 3,50,000/- ಕೊಟ್ಟಿದ್ದೆ. ಆಗಸ್ಟ್ 2022 ರಲ್ಲಿ ಆರೋಪಿ ನನಗೆ ಪಂಚರ ಸಮಕ್ಷಮ ರೂ 1,50,000/- ಕೊಟ್ಟರು ಹಾಗೂ ಉಳಿದ ರೂ. 2,00,000/- ಚೆಕ್ ಬರೆದುಕೊಟ್ಟರು ಎಂದು ಹೇಳುತ್ತಾರೆ. ರೂ. 3,50,000/- ನಾನು ಆರೋಪಿಗೆ ಕೊಟ್ಟಿದ್ದೆ ಎಂದು ಹಾಗೂ ಆತ ನನಗೆ ರೂ. 1,50,000/- ಪಂಚರ ಸಮಕ್ಷಮ ವಾಪಸ್ ಮಾಡಿದ್ದ ಎಂದು ನನ್ನ ಪಿರ್ಯಾದಿಯಲ್ಲಿ ಹೇಳಿ ಬರೆಸಿಲ್ಲ. ಆ ರೀತಿ ಬರೆಸಲು ನನಗೆ ಅಡಚಣೆ ಇರಲಿಲ್ಲ.

2. 2019 ರಲ್ಲಿ ನಾನು ಆರೋಪಿಗೆ ಹಣ ಕೇಳಿದ್ದೆ, ಆತ ಸ್ವಲ್ಪ ಸಮಯ ಕೊಡಿ ಹಣ ವಾಪಸ್ ಕೊಡುತ್ತೇನೆ ಎಂದು ಹೇಳಿದ್ದ ಎಂದರೆ ನಿಜ. ಆರೋಪಿಯು ನಾನು ಕೊಟ್ಟ ನೋಟಿಸ್ ಗೆ ಉತ್ತರ ಕೊಟ್ಟಿಲ್ಲ ಎಂದರೆ ನಿಜ. ಆರೋಪಿಯ ಆರ್ಥಿಕ ಪರಿಸ್ಥಿತಿ ಸರಿ ಇಲ್ಲದ ಕಾರಣ ನನಗೆ ಸಮಯ ಕೇಳಿದ್ದ ಎಂದರೆ ನಾನು 2020 ರ ತನಕ ತಡೆದು ಆ ನಂತರ ಚೆಕ್ ಹಾಕಿದ್ದೆ ಎಂದು ಹೇಳುತ್ತಾರೆ. 16.02.2020 ಕ್ಕೆ ಚೆಕ್ ಕೊಟ್ಟಿದ್ದ. ಆರೋಪಿಯು ನನಗೆ ಸಾಕಷ್ಟು ಬಾರಿ ಭೇಟಿಯಾಗಿ ಕೇಸ್ ಹಾಕಬೇಡಿ ಎಂದು ವಿನಂತಿ ಮಾಡಿಕೊಂಡ ಎಂದರೆ

ಸರಿಯಲ್ಲ. ದಿಃ 06.04.2021 ರಂದು ಆರೋಪಿಯು ನನ್ನ ಕೆನರಾ ಬ್ಯಾಂಕ್ ಖಾತೆಗೆ ರೂ.2,00,000/- ಹಣ ವರ್ಗಾವಣೆ ಮಾಡಿದ್ದ ಎಂದರೆ ನಿಜ. ಸಾಕ್ಷಿಗೆ ಈಗ ಬ್ಯಾಂಕ್ ಅಕೌಂಟ್ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ಆರೋಪಿಯು ರೂ.2,00,000/- ಹಣ ವರ್ಗಾವಣೆ ಮಾಡಿದ ನಂತರ ನಾನು ಕೇಸ್ ವಾಪಸ್ ತೆಗೆದುಕೊಳ್ಳುತೇನೆ ಎಂದು ಭರವಸೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆದರೂ ಸಹ ನಾನು ದುರುದ್ದೇಶದಿಂದ ಈ ಕೇಸ ಮುಂದುವರೆಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಕೊಡಬೇಕಾದಂತಹ ಎಲ್ಲ ಹಣ ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ಆದರೂ ನಾನು ಪ್ರಕರಣ ಮುಂದುವರೆಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನಗ ಇನ್ನೂ ರೂ.1,50,000/- ಕೊಡಬೇಕು ಎಂದು ಸ್ವತಃ ಹೇಳುತ್ತಾರೆ. ಆ ರೀತಿ ನಾನು ಪಿರ್ಯಾದಿಯಲ್ಲಿ ಹೇಳಿ ಬರೆಸಿಲ್ಲ, ಬರೆಸಲು ಅಡಚಣೆ ಇರಲಿಲ್ಲ. ನಾನು ನ್ಯಾಯಾಲಯದ ಮುಂದೆ ನನ್ನ ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರು ಮಾಡಲು ತೊಂದರೆ ಇಲ್ಲ. ನನಗೂ ಮತ್ತು ಆರೋಪಿಗೂ ಯಾವುದೇ ವ್ಯವಹಾರ ಇಲ್ಲ, ಆರೋಪಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನಾನು ಈ ಕೇಸ್ ಹಾಕಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ರೂ.1,50,000/- ಹಣ ಬಾಕಿ ಕೊಡಬೇಕಾಗಿತ್ತು ಆದ್ದರಿಂದ ನಾನು ಕೇಸ್ ಹಾಕಿದ್ದೇನೆ. ಆತ ನನ್ನ ಬಳಿ ತೆಗೆದುಕೊಂಡಿದ್ದು ರೂ.3,50,000/-, ಆತ ರೂ.2,00,000/- ಕೊಟ್ಟಿದ್ದಾನೆ, ಉಳಿದ ರೂ.1,50,000/- ಕೊಡಬೇಕು. ನಾನು ಆತ ಮೊದಲು ಕೊಟ್ಟಿದ್ದು ರೂ.1,50,000/- ಎಂದು ತಿಳಿದಿದ್ದೆ, ಆದ್ದರಿಂದ ರೂ.2,00,000/- ಚೆಕ್ ಕೇಸ್ ಹಾಕಿದ್ದೆ ಎಂದು ಹೇಳುತ್ತಾರೆ. ನಾನು ನ್ಯಾಯಾಲಯದ ಮುಂದೆ ಎಲ್ಲಾ ತಿಳಿದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**ಸಹಿ/-**

**(ಆದಿತ್ಯ ಆರ್. ಕಲಾಲ್)**

**ಸಿ ಜೆ ಮತ್ತು ಜೆ.ಎಂ.ಎಫ್.ಸಿ, ಹುಕ್ಕೇರಿ.**